ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 23.02.2024.

**ಪಾಟೀ ಸವಾಲುಃ 10 ನೇ ಪ್ರತಿವಾದಿ ಪರ ಶ್ರೀ ಪಿ.ವಿ.ಎ. ವಕೀಲರಿಂದಃ**

ನನ್ನ ಅಜ್ಜ ಮೌಲಾಸಾಬ ರವರು ತಾವು ಜೀವಂತ ಇದ್ದಾಗಲೇ 6 ಮತ್ತು 7 ನೇ ಪ್ರತಿವಾದಿಗಳ ಹೆಸರಿನಲ್ಲಿ ಮ್ಯೂಟೇಷನ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂ.44/3 ರ ಜಮೀನನ್ನು ನನ್ನ ಅಜ್ಜ 6 ಮತ್ತು 7 ನೇ ಪ್ರತಿವಾದಿಗಳ ಹೆಸರಿನಲ್ಲಿ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. 6 ಮತ್ತು 7 ನೇ ಪ್ರತಿವಾದಿಗಳು ಸದರಿ ಸರ್ವೆ ನಂ.44 ನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ಖರೀದಿ ಹಿಡಿದಾಗಿನಿಂದಲೂ ಇವತ್ತಿನವರೆಗೂ ತಾನು ಖರೀದಿಸಿದ ಜಮೀನಿನಲ್ಲಿ ಕಬ್ಜೆ ಇರುತ್ತಾನೆ ಎಂದರೆ ಸರಿಯಲ್ಲ.

ನನ್ನ ಅಜ್ಜಿಯ ಹೆಸರು ಮೌಲಂಬೀ ಇರುತ್ತದೆ. 10 ನೇ ಪ್ರತಿವಾದಿ ಖರೀದಿಸಿದ ಕ್ರಯ ಪತ್ರದಲ್ಲಿ ನನ್ನ ಅಜ್ಜ ಹಾಗೂ ಅಜ್ಜಿ ಮತ್ತು ಚಾಂದಬೀ ರವರು ಸಹಿಗಳು ಕೂಡಾ ಇರುತ್ತವೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ಖರೀದಿಸಿದ ಸ್ವತ್ತಿನಲ್ಲಿ ನಾನು ಕಬ್ಜೆಯಲ್ಲಿ ಇರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ಸಿವಿಲ್ ನ್ಯಾಯಾಲಯ ಆಳಂದ ರವರಲ್ಲಿ ನನ್ನ ವಿರುದ್ಧ ನಿರ್ಬಂಧ ಕಾದ್ಮೆ ದಾವೆ ಹೂಡಿದ್ದು, ಅದರಲ್ಲಿ ನಾನು ನನ್ನ ವಕೀಲರನ್ನು ಕೊಟ್ಟು ಹಾಜರಾಗಿದ್ದೇನು ಎಂದರೆ ಸರಿ. 1 ರಿಂದ 5 ನೇ ಪ್ರತಿವಾದಿಯರ ವಿರುದ್ಧ ಸದರಿ ನ್ಯಾಯಾಲಯದಲ್ಲಿ 10 ನೇ ಪ್ರತಿವಾದಿಯ ಕಬ್ಜೆಗೆ ಹರಕತ್ ಮಾಡಬಾರದು ಎಂದು ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ.

1999 ರಲ್ಲಿಯೇ 6 ಮತ್ತು 7 ನೇ ಪ್ರತಿವಾದಿಗಳ ಹೆಸರಿನಲ್ಲಿ ನನ್ನ ಅಜ್ಜ

ಮ್ಯೂಟೇಷನ್ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಮೀರ ಅಲಿ ನನ್ನ ತಂದೆ ಇರುತ್ತಾರೆ. ನಿಪಿ-9 ರಂತೆ ನನ್ನ ತಂದೆ ಅಮೀರ ಅಲಿ ರವರಿಗೆ 2 ಸರ್ವೆ ನಂಬರಗಳಲ್ಲಿ 4 ಎಕರೆ ಹಾಗೂ 6 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಅಜ್ಜ ದಿಃ 27.08.2013 ರಂದು ತಿರಿಕೊಂಡಿರುತ್ತಾರೆ. ಆ ಬಗ್ಗೆ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ನನ್ನ ಅಜ್ಜ ಮೌಲಾಸಾಬ ರವರು ನನ್ನ ತಂದೆ ಅಮೀರ ಅಲಿ ರವರಿಗೆ ಹಿಭಾ ಮಾಡಿಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹಿಭಾ ಮಾಡಿದ ದಿನ ಕಬ್ಜೆ ಕೂಡಾ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಿಭಾ ಮಾಡಿದ ಬಗ್ಗೆ ನಮ್ಮಗಳಲ್ಲಿ ಯಾವುದೇ ದಾಖಲೆಗಳು ಇರುವುದಿಲ್ಲ, ಏಕೆಂದರೆ ಮೌಖಿಕವಾಗಿ ಹಿಭಾ ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಇಂತಹ ದಿನ ಹಾಗೂ ಇಂತಹವರ ಸಮಕ್ಷಮ ಹಿಭಾ ಮಾಡಿಕೊಟ್ಟಿರುತ್ತಾರೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಪರಿಹಾರದ ಹಣದಲ್ಲಿ ತನಗೂ ಕೂಡಾ ಪಾಲು ಬೇಕು ಎಂದು ಅಮಲು ಬಜಾವಣೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಪರಿಹಾರದ ಹಣದಲ್ಲಿ 6 ಮತ್ತು 7 ನೇ ಪ್ರತಿವಾದಿಗಳಿಗೆ ಮಾತ್ರ ಹಣ ಪಡೆಯಲು ಹಕ್ಕು ಇದ್ದು, ನನ್ನ ತಾಯಿ 1 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

10 ನೇ ಪ್ರತಿವಾದಿಯ ಜಮೀನನ್ನು ಒಡೆದುಕೊಳ್ಳುವ ಉದ್ದೇಶದಿಂದ ವಾದಿಗಳ ಜೊತೆ ಶಾಮಿಲ್ ಆಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಕೂಡಾ ನಾವುಗಳ ಸಲ್ಲಿಸಿದ ಅರ್ಜಿ ವಜಾಯಾಗಿರುತ್ತದೆ ಎಂದರೆ ಸರಿಯಲ್ಲ.

ಈ ನ್ಯಾಯಾಲಯದ ಮತ್ತು ಸಿವಿಲ್ ನ್ಯಾಯಾಲಯಗಳ ಆದೇಶಗಳನ್ನು ಪ್ರಶ್ನೆ ಮಾಡದೇ ಇರುವ ಕಾರಣ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ಯಾವುದೇ ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನಿನಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಕಬ್ಜೆ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**